‘ಲಕ್ಷ್ಮಿ, ಹೆಗ್ಡಳ್ಳಿಗ ಹೋಗಿದ್ಯಲ್ಲ, ಅಂಕುಗ ಪೋನ್ ಮಾಡ್ಸಿದ್ಯಾ?’

‘ಮರತ್ಗಬುಟ್ಟಿದ್ದೆ! ಹುಂ. ಪೋನ್ ಮಾಡ್ಸಿದ್ದೆ ಆದ್ರ ಚುಚ್ಚಾಪು ಚುಚ್ಚಾಪು ಅಂತ ಬತ್ತೈತಂತ ಅಂದ್ರು’

‘ಚುಚ್ಚಾಪು? ಅಂತಾ ಬೆಂಗ್ಳೂರಲ್ಲಿ ಪೋನು ಚುಚ್ಚಾಪು!’

‘ಏನೂ ಇಲ್ಲಕಣ, ಸ್ಯಾನೆ ಕೆಲ್ಸ ಇರ್ತದ ಚಾರ್ಜ್ ಮಾಡಾಕ ಟೇಮಿಲ್ದೆಯ…’

‘ಅಲ್ಲಕಣಮ್ಮಿ ಇಲ್ಲಿಯ ಹೀಂಗ, ಇನ್ನ ಅಂತಾ ದೊಡ್ಡೂರಲ್ಲಿ ಇನ್ನೆಂಗೋ? ಅಲ್ಲಿಗೂ ಬಂದಿದ್ದಂತಾ ಮಾರಿ?’

‘ಅಲ್ಲಿ ಏನೂ ಆಗಿರಲ್ಲಕಣ, ತಗ ಹಿಟ್ಟುಣ್ಣು’

‘ಅಲ್ಲಕಣಮ್ಮಿ ನನ್ನೂಸು…’

‘ಏನೂ ಆಗಿರಲ್ಲಕಣ ಈಗ ಹಿಟ್ಟುಣ್ಣು, ಬೆಳಕರಿತ್ಲೇ ಹೆಂಗಾರ ಮಾಡಿ ಗೊಂಬ ಡಾಕ್ಟ್ರತವ ಕರ್ಕಂಡೋಯ್ತಿನಿ’ ಅಂದು ಲಕ್ಷ್ಮಿ ಗಂಡಗ ತಾನೇ ಮುದ್ದೆಯ ತಿನ್ನಿಸ್ಬುಟ್ಟು ಅವನನ್ನ ಮನ್ಗಿಸಿ ಹಿಟ್ಟುಣ್ಣಾಕಂತ ಕೂತ್ರ ತನ್ ಕೂಸು ನೆನ್ಪಾಗಿ ಅಂಗೆ ಕೂತಳು… ‘ಇಂತಾ ಹಳ್ಳಿ ಊರಲ್ಲಿಯಾ ಹುಡೀಕಂಡು ಬಂದು ಹೊಡ್ದವ್ರ, ಇನ್ನ ಆ ಅಂತಾ ಸಿಟಿಲಿ ಬುಟ್ಟಾರ? ಬೇಕರಿ ಬಾಕ್ಲು ಹಾಕಿದ್ರ? ಊರಿಗ ಬರಾಕ ಬಸ್ಸು ಟ್ರೇನು ಇಲ್ದಿದ್ರ?’ ತನ್ನೊಳಗ ಹುಟ್ಟಿಕೊಂಡ ಪ್ರಶ್ನೆಗಳಿಗ ಲಕ್ಷ್ಮಿ ನಡುಗಿ ಹೋದಳು. ಮುರ್ಕಂಡಿದ್ದ ತುತ್ತು ಕೈ ಬೆರಳುಗಳ ನಡುವ ಒಣಗಿಹೋಗಿತ್ತು.

ಆ ನೋವಿಗ ನಿದ್ದಾಲೂವಿ ನರಳಾಡ್ತಾ ಇರೋ ನಾರಾಯ್ಣನ ಕಂಡು ಲಕ್ಷ್ಮಿಗ ಕಳ್ಳು ಹಿಡ್ದಂಗ ಆಯ್ತು. ‘ಒಂದು ಜಿನದಾಗ ಏನೇನೆಲ್ಲ ಆಗೋಯ್ತಲ್ಲ ಪಟ್ಲದಮ್ಮ. ಅತ್ತಗ ನನ್ನೂಸು ಇತ್ತಗ ಇಂವ ನಮ್ಮನ್ನ ನೀನೇ ಕಾಪಾಡ್ಬೇಕು ತಾಯಿ. ಈಗಿರೋ ಮಾರಿಗಳೇ ಬಡೂರನ್ನ ಕಿತ್ತು ತಿಂತ ಇರಬೇಕಾರ ಹೊಸದೊಂದು ಸೇರ್ಕಬುಡ್ತಲ್ಲ. ನನ್ನೂಸನ್ನ ಊರಿಗ ಕರೆಸ್ಕಂಬುಡು ತಾಯಿ ನಿನಗೊಂದು ಮರಿ ಕುಯ್ತಿನಿ’. ‘ಮರಿ’ ನನ್ ಮರಿಗಳು ಎತ್ತಗೋದ್ವು?! ‘ಅದೋ… ಕುರಿ ಮರ್ಗಳೆಲ್ಲೆ?’ ನಾರಾಯ್ಣಿ ನೋವು ಮರೆತು ನಿದ್ದೆಗ ಜಾರಿದ್ದನು. ಅವನಿಗ ಲಕ್ಷ್ಮಿಯ ಮಾತ್ಗಳು ಕೇಳ್ಳಿಲ್ಲ. ಅವಳ ಕಣ್ಣುಗಳು ಆ ಕತ್ಲಲೂವಿ ನಾಕು ಮರಿಗಳ ಕಾಣಲು ಪರದಾಡಿತು.

***

ಹಗಲೂ ರಾತ್ರಿಗಳಂದ್ರ ಏನು ಅಂತ ಗೊತ್ತಿರದ ಆ ಮಾನಗರದ ಮೂಲೆ ಮೂಲೆಗಳಲ್ಲಿ ಅವುಸ್ಕಂಡು ಕೂತಿದ್ದ ಜನ್ಗಳು ಹಗಲಿನ ಬೆಳಕು ಕರಗಿ ಸಿಟಿಲೈಟುಗಳು ಕಣ್ಣುಜ್ಜಿಕೊಂಡು ಎದ್ದು ಕುಳಿತದ್ದೇ ಎದ್ದರು. ಎಷ್ಟು ವರ್ಷ ಆಗಿತ್ತೋ ಆ ಮಾನಗರ ಮನಗಿ. ವಾನಗಳು, ಜನ್ಗಳು ಹಟ್ಟಿ ಒಳಕ್ಕ ಸೇರ್ಕಂಡು ಲಾಕ್ ಆಗಿ ಕೂತ್ಗಂಡಿದ್ದನ್ನ ನೋಡುತ್ಲೇ ಆ ಮಾನಗರ ಮಯ್ತುಂಬ ಒಂದ್ಸಲ ಆಕಳಿಸಿ ಕರೆಂಟು ಆಪ್ ಮಾಡ್ಕಂಡು ಮನ್ಗಿತು. ನಿದ್ದೆಯು ಕಣ್ತುಂಬಿ ರಗ್ಗೊಸ್ಕಂಡು ಮಗ್ಗುಲಾಗಬೇಕು… ಆ ಟೇಮಿಗ ಮಾನಗರದ ಮೈಮೇಲೆಲ್ಲ ಪಾದಗಳು ತುಳಿದಾಡಿ ಮಸಾಜು ಮಾಡ್ದಂಗ ಆಗಿ ಆ ಮಾನಗರವು ಹಾಯ್ ಹಾಯ್ ಅಂದಿತು. ಆದರೂ ಅದಕ್ಕ ಗಾಸು ‘ಇದುವರೆಗ ಈ ಪಾಟಿ ಪಾದಗಳು ತನ್ ಮ್ಯಾಕ್ಕ ಹರಿದಾಡಿದ ಫೀಲು ತನಗ ಆಗಲೇ ಇಲ್ವಲ್ಲ!’ ಯಾವಾಗ ನೋಡಿದ್ರೂ ಬಸ್ಸು ಕಾರು ಸ್ಕೂಟರು ಟ್ರೇನು ವಿಮಾನಗಳ ಟೈರುಗಳು ಓಡಾಡಿ ಎಲೆಕ್ಟ್ರಿಕ್ಟ್ ಮಸಾಜು ಮಾಡಿಸ್ಕಂಡ ಫೀಲು ಅನುಭವಿಸಿದ್ದ ಅದಕ್ಕ ಇಂದ್ಯಾಕೋ ಬ್ಯಾರೆ ತರದ ಸುಕವುಂಟಾಯ್ತು. ಅದು ಸ್ವಾದಲ್ಲಿ ಮಿನುಗಿದವರಂತೆ ಮನಿಕಂಡು ಆ ಸಾವಿರ ಸಾವಿರ ಪಾದಗಳ ಮಸಾಜನ್ನು ಅನುಭವಿಸ್ತಾ, ‘ಈ ಲೋಕ ಯಾವಾಗ್ಲೂ ಹಿಂಗ ಇದ್ಬುಡ್ಲಿ ಸಿವನೆ’ ಅಂದ್ಕಂಡು ಕಣ್ಮುಚ್ಚಿತು.

ಮೆಟ್ರೋ ಸ್ಟೇಷನ್ನಿನ ಮರೆಯಲ್ಲಿ ಅವುಸ್ಕಂಡಿದ್ದ ಅಂಕಪ್ಪನಾದಿಯಾಗಿ ಜನಗಳು ರೋಡಿಗ ಇಳ್ದರು. ಒಪ್ಪೊತ್ನಿಂದ ಯಾರಿಗೂ ತಿನ್ನಾಕ ಏನೂ ಸಿಕ್ಕಿರಲಿಲ್ಲ. ಕುಡಿಯಾಕ ನೀರೂ ಇರಲಿಲ್ಲ. ಚಿಕ್ಕೈಕ್ಳು ಅತ್ತೂ ಅತ್ತು ಕಣ್ಣೀರು ಕಾಲಿ ಆಗುತ್ಲೆ ತಮ್ಮ ಅವ್ವಂದ್ರ ಮಡಿಲಲ್ಲಿ ಮನುಗಿದ್ರು.ಹೆಂಗಾರ ಮಾಡಿ ಊರಿಗ ಹೋಗ್ಬಿಡಬೇಕು ಅಂತ ಎದ್ದವರು ಮನುಗಿದ್ದ ಐಕಳನ್ನ ಎಬ್ಬಿಸಿದ್ರು. ಐಕಳ ಜೊತಗ ಮನ್ಗಿದ್ದ ಆ ಹಸಿವು ಮತ್ತು ಅಳುವನ್ನ ಎಬ್ಬಿಬುಟ್ರು. ತಗಾ ಅಳುವೂ ರೋಡಿಗಿಳಿಯಿತು. ಐಕ್ಳ ಅಪ್ಪಿದ್ರು ಸುಮ್ನಿರ್ಸಾಕ ಎಲ್ಡೇಟು ಕೊಟ್ರು. ‘ಬೇಡಿ ಹೊಡಿಬೇಡಿ ಅವು ಹಸ್ಗಂಡಿರ್ತವ. ಏನಾದ್ರೂ ತಿನ್ನಾಕಿದ್ರ ಕೊಡಿ. ಐಕ್ಳು ಅತ್ರ ಅದನ್ನ ಕೇಳ್ಬುಟ್ಟು ಲಾಟಿಗಳು ನಮ್ಮಕಡೆ ಬಂದ್ರ ನಮ್ಗೂ ಏಟು ಬೀಳ್ತವ. ಬೇಡಿ ಹೊಡಿಬೇಡಿ’ ಅಂದ ಹಿರಿಯರೊಬ್ಬರ ಮಾತು